ನೀರಾ ಸೆರಬರಾಜು ಯೋಜನೆ ಇದೆ, ಅದರ ಕಾರ್ಯ ಪೂರ್ತಿಯಾಗಿಲ್ಲ. ಇದು ಯಾವಾಗ ಪೂರ್ಣವಾಗಂತ್ತದೆ ಎನ್ನುವುದನ್ನು ತಿಳಿಸಬೇಕು.

ಶ್ರೀ ಎಂ. ರಘುಪತಿ.—ಐದನೆಯ ಪ್ರಶ್ನೆಗೆ ಮೊದಲು ಉತ್ತರ ಕೊಡುತ್ತೇನೆ. ಈ ಸುರಕ್ಷಿತ ನೀರಾ ಯೋಜನೆ ಈ ಯೋಜನೆಯಲ್ಲಿ ಸೇರಿಲ್ಲ. ಅದಂ ಸೇರದೇ ಇರುವುದರಿಂದ ಅದನ್ನು ಈಗ ಕಾರ್ಯ ರೂಪಕ್ಕೆ ತೆಗೆದುಕೊಳ್ಳುವುದಕ್ಕೆ ಕೇಂದ್ರದಿಂದ ಹಣ ಬೇಕಾಗಿದೆ. ಇದರ ಬಗ್ಗೆ ಕೇಂದ್ರಕ್ಕೆ ಬರೆಯುತ್ತೇನೆ. ಅವರಿಂದ ಹಣ ಬಂದತಕ್ಷಣ ಅದನ್ನು ಮಾಡುತ್ತೇವೆ. ಇನ್ನು ಕಲ್ಲಂ ಬಂಡೆಯ ವಿಷಯದ ಬಗ್ಗೆ ಹೇಳಿದ್ದಾರೆ, ಇದಕ್ಕೆ ಕೇಂದ್ರ ಸರ್ಕಾರದ ಅರ್ಧ ಹಣ ನಮ್ಮ ಸರ್ಕಾರದ ಅರ್ಧ ಹಣದ ಅವಶ್ಯಕತೆ ಇದೆ. ಇದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಬರೆಯುತ್ತೇವೆ. ಅವರಿಂದ ಹಣ ಬಂದತಕ್ಷಣ ಇದನ್ನು ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ. ರಸ್ತೆ ಸೇತುವೆ ಬಗ್ಗೆ ಹೇಳಿದ್ದಾರೆ. ಇದನ್ನು ಆದ್ಯತೆಯ ಮೇರೆಗೆ ಮಾಡಿಸುವುದಕ್ಕೆ ಏರ್ಪಾಡು ಮಾಡುತ್ತೇನೆಂದು ಹೇಳುತ್ತೇನೆ. ಮಿನು ಒದಗಿಸುವ ಪ್ರಾಂಗಣದ ಕೆಲಸವನ್ನು ಆದಷ್ಟು ಬೇಗ ಕಾರ್ಯಾರಂಭ ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ, ಇದರ ಕಾರ್ಯಾರಂಭ ಮಾಡಿ ಕೆಲಸ ಪೂರೈಸುವುದಕ್ಕೆ ಆದ್ಯತೆಯ ಮೇರೆಗೆ ಮಾಡಿ ಎಂದು ಹೇಳುತ್ತೇನೆ.

ಶ್ರೀ ಜಿ. ಎಸ್. ಆಚಾರ್.—ಅಧ್ಯಕ್ಷರೇ, ಸುರಕ್ಷಿತ ನೀರು ಯೋಜನೆ ಹೊಸದಾಗಿ ಸೇರಬೇಕಾಗಿಲ್ಲ ಇದೇ ಯೋಜನೆಯಲ್ಲಿಯೇ ಆಗುತ್ತಿದೆ. ಇದೇ ಯೋಜನೆ ಪ್ರಾರಂಭವಾಗಿ ಆಗುತ್ತಾ ಇದ್ದದ್ದು ಈಗ ಅದು ಅಪೂರ್ಣವಾಗಿದೆ, ಇದು ಯಾವಾಗ ಸಂಪೂರ್ಣ ಆಗುತ್ತದೆ ಎಂದು ಹೇಳಬೇಕು?

ಶ್ರೀ ಎಂ. ರಘುಪತಿ.—ಈಗ ಆದ್ಯತೆಯ ಮೇರೆಗೆ ಕೆಲಸ ಮಾಡಿಸುತ್ತಿದ್ದೇವೆ. ಆದ್ದರಿಂದ ಆದಷ್ಟು ಬೇಗ ಸಂಪೂರ್ಣ ಮಾಡಿಕೊಡಲಾಗುತ್ತದೆ.

ಅಧ್ಯಕ್ಷರು.—ಮಾನ್ಯ ಚಿನ್ನಪ್ಪನವರೇ ನಿಮ್ಮ ಪ್ರಶ್ನೆ ಪಾರೆಸ್ಟ್ ಡಿಪಾರ್ಟ್‌ಮೆಂಟ್‌ಗೆ ಹೋಯಿತಂ. ಪಾರೆಸ್ಟ್ ಡಿಪಾರ್ಟ್‌ಮೆಂಟ್‌ನಿಂದ ಉತ್ತರ ಕೊಡಿಸುತ್ತೇನೆ.

ಶಿಕಾರಿಪುರ ಪ್ರಥಮ ದರ್ಜೆ ಕಾಲೇಜಿನ ಕಟ್ಟಡದ ಕೆಲಸ ಸ್ಥಗಿತಗೊಂಡಿರುವುದು

೧೫೫೩. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).- ಮಾನ್ಯ ಕಂದಾಯ, ಯೋಜನೆ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಿಕಾರಿಪುರದಲ್ಲಿರುವ ಪ್ರಥಮದರ್ಜೆ ಕಾಲೇಜಿನ ಕಟ್ಟಡದ ಕೆಲಸವು ಸ್ಥಗಿತವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ,

ಆ) ಇದರ ಜೊತೆಯಲ್ಲಿ ಪ್ರಾರಂಭವಾದ ಕೊಡಗು ಜಿಲ್ಲೆಯ ಕಾಲೇಜಿನ ಕಟ್ಟಡದ ಕೆಲಸವು ಮುಂಗಿದಿದ್ದು ಶಿಕಾರಿಪುರದ ಕಟ್ಟಡದ ಕೆಲಸವು ಮುಗಿಯದೆ ಇರಲು ಕಾರಣಗಳೇನು?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನೆ ಮತ್ತು ನೀರಾವರಿ ಮಂತ್ರಿಗಳು).—

ಅ) ಬಂದಿದೆ.

ಆ) ಹಣದ ಕೊರತೆ ಮತ್ತು ಕಂಟ್ರಾಕ್ಟರ್‌ನ ವಿಳಂಬ ಕಾರಣ.

೧೨.೦೦ ಮಧ್ಯಾಹ್ನ

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರ ಉತ್ತರವನ್ನು ನೋಡಿದರೆ, ಸರ್ಕಾರ ಮಲತಾಯಿ ಧೋರಣೆಯನ್ನು ಮಾಡುತ್ತಿದೆ ಎಂದು ಹೇಳಬೇಕಾಗಿದೆ. ಏಕೆಂದರೆ ಈ ಕಾಲೇಜಿನ ಕಟ್ಟಡ ಪ್ರಾರಂಭವಾದ ಕಾಲದಲ್ಲೇ ಇನ್ನೊಂದು ಕ್ಷೇತ್ರದಲ್ಲಿ ಪ್ರಾರಂಭವಾದ ಕಾಲೇಜಿನ ಕಟ್ಟಡದ ಕೆಲಸ ಪೂರ್ಣವಾಗಿದೆ. ನಾನಂ ಈ ಕಾಲೇಜಿಗೆ ಸಂಬಂಧಿಸಿದಂತೆ ಕಳೆದ ೩ ವರ್ಷಗಳಿಂದ ಪ್ರಶ್ನೆಯನ್ನು ಕೇಳುತ್ತಾ ಬಂದಿದ್ದೇನೆ. ನನ್ನ ಕ್ಷೇತ್ರದ ಜನರಿಂದ ೧ ಲಕ್ಷ ರೂಪಾಯಿಗಳ ವಂತಿಗೆಯನ್ನು ಕಲೆಕ್ಟ್ ಮಾಡಿ ಕೊಟ್ಟಿದ್ದೇನೆ. ನಾನು ದುಡ್ಡನ್ನು ಕಲೆಕ್ಟ್ ಮಾಡಿ ಕೊಟ್ಟಿದ್ದರೂ ಕೂಡ ಈ ಕಾಲೇಜಂ ಕಟ್ಟಡ ಇನ್ನೂ ಪ್ರಾರಂಭವಾಗಲಿಲ್ಲ. ಆದರೆ ಕೊಡಗಂ ಜಿಲ್ಲೆಯಂ ಕಾಲೇಜಂ ಕಟ್ಟಡ ಪೂರ್ಣ

ವಾಗಿದೆ. ನೀವು ನನ್ನ ಕ್ಷೇತ್ರದ ಈ ಕಟ್ಟಡಕ್ಕೆ ಹಣವನ್ನು ಕೊಡದಿದ್ದರೆ ಆ ಕಂಟ್ರಾ ಕ್ಟರ್ ಯಾವ ರೀತಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ? ಪೌಂಡೇಷನ್ ಮಟ್ಟವನ್ನು ಬಿಟ್ಟು ಇನ್ನೂ ಕೂಡ ಈ ಕಟ್ಟಡದ ಕೆಲಸ ಮೇಲಕ್ಕೆ ಬಂದಿಲ್ಲ. ತಮಗೆ ಒಂದೇ ಒಂದು ಮಾತನ್ನು ನಾನು ಹೇಳುತ್ತೇನೆ. ನಿಮ್ಮ ಇಡೀ ಈ ಇಲಾಖೆಯಲ್ಲಿ ಇರತಕ್ಕದ್ದು ಇದೊಂದೇ ಕಟ್ಟಡ ಲೋಕೋಪಯೋಗಿ ಇಲಾಖೆಗೆ ಲಕ್ಷಾಂತರ ರೂಪಾಯಿಗಳನ್ನು ಕೇವಲ ಸಂಬಳಕ್ಕಾಗಿ ಕೊಡುತ್ತಿದ್ದಿರಿ. ಅವರು ಏನು ಮಾಡಬೇಕಿದ್ದಾರೆ ಹೀಗಾದರೆ ನಾನು ನನ್ನ ಕ್ಷೇತ್ರದ ಜನರಿಗೆ ಯಾವ ರೀತಿ ಮುಖವನ್ನು ತೋರಿಸಬೇಕು?

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ೨ ಕಾಲೇಜುಗಳ ಕಟ್ಟಡಗಳ ಬಗ್ಗೆ ಹೇಳಿದ್ದಾರೆ. ಕುಶಾಲ ನಗರದಲ್ಲಿ ಇದೇ ಕಾಲದಲ್ಲಿ ಪ್ರಾರಂಭವಾದ ಕಾಲೇಜಿನ ಕಟ್ಟಡ ಮುಗಿಯುತ್ತಾ ಬಂದಿದೆ, ಆದರೆ ನನ್ನ ಕ್ಷೇತ್ರದಲ್ಲಿ ಪ್ರಾರಂಭವಾದ ಕಾಲೇಜು ಕಟ್ಟಡ ಇನ್ನೂ ಮುಗಿದಿಲ್ಲ ಎಂದು ಹೇಳಿದ್ದಾರೆ. ಕುಶಾಲ ನಗರದ ಕಾಲೇಜಿನ ಕಟ್ಟಡವನ್ನು ಒಪ್ಪಿಕೊಂಡಿದ್ದ ಕಂಟ್ರಾ ಕ್ಟರ್ ಸುಮಾರು ಮುಕ್ಕಾಲುಭಾಗ ಕೆಲಸವನ್ನು ಹಣದ ಮುಗ್ಗಟ್ಟು ಇಲ್ಲದೇ ೧೯೬೫ರ ಕೊನೆಯ ಭಾಗದಲ್ಲಿ ಮಾಡಿ ಮುಗಿಸಿದ್ದ. ಆದರೆ ಶಿಕಾರಿಪುರದ ಕಾಲೇಜು ಕಟ್ಟಡವನ್ನು ಒಪ್ಪಿಕೊಂಡಿದ್ದ ಕಂಟ್ರಾ ಕ್ಟರನ ಕೆಲಸ ಮಾಡಲು ೨–೩ ವರ್ಷಕಾಲ ಬಹಳ ಹಿಂದೆ ಬಿತ್ತು. ೧೯೬೬ರಿಂದ ಇದುವರೆಗೆ ಸುಮಾರು ೧೦–೧೨ ನೋಟೀಸುಗಳನ್ನು ಈ ಕಂಟ್ರಾ ಕ್ಟರ್‌ಗೆ ಕೊಟ್ಟು ನೀನು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಆದಷ್ಟು ಬೇಗ ಈ ಕೆಲಸ ಮುಗಿಸಬೇಕೆಂದು ಹೇಳಿದ್ದೇವೆ. ಆದರೂ ಈ ಕಂಟ್ರಾ ಕ್ಟರ್ ವಿಳಂಬ ಮಾಡುತ್ತಾ ಬಂದಿದ್ದಾನೆ. ಇದರಲ್ಲಿ ಒಂದು ಮಾತನ್ನು ಹೇಳುವುದಾದರೆ ಈ ಕಂಟ್ರಾ ಕ್ಟರ್‌ಗೆ ೪ ವರ್ಷದ ಕಾಲಾವಕಾಶವನ್ನು ಏನು ಕೊಟ್ಟಿದ್ದೇವೆ ಮೊದಲನೆಯದಾಗಿ ಅದೇ ತಪ್ಪು ಎಂದು ನನಗನ್ನಿಸುತ್ತದೆ. ಇದುವರೆಗೆ ಅಲ್ಲಿ ಸುಮಾರು ೮೮ ಸಾವಿರ ರೂಪಾಯಿಗಳ ಕೆಲಸ ಆಗಿದೆ. ಪಾಯದ ಕೆಲಸ ಪೂರ್ತಿಯಾಗಿದೆ ಮುಂದಿನ ವರ್ಷಗಳಲ್ಲಿ ಬೇರೆ ರೀತಿಯಲ್ಲಿ ಕೆಲಸಮಾಡಿಸಲು ಪ್ರಯತ್ನ ಮಾಡುತ್ತೇವೆ ಮತ್ತು ಈ ಕಂಟ್ರಾ ಕ್ಟರ್‌ನ ಮೇಲೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸ್ವಾಮಿ, ೪ ವರ್ಷಗಳಕಾಲ ತಡವಾಗಿದೆ. ನಾನು ನನ್ನ ಕ್ಷೇತ್ರದ ಜನರಿಂದ ೧ ಲಕ್ಷ ರೂಪಾಯಿ ವಂತಿಗೆಯನ್ನು ಕಲೆಕ್ಟ್ ಮಾಡಿ ಕೊಟ್ಟಿದ್ದೇನೆ. ನಿಮ್ಮ ಇಲಾಖೆಯಿಂದಲಾದರೂ ಈ ಕೆಲಸವನ್ನು ತೆಗೆದುಕೊಂಡು ಪೂರ್ಣಮಾಡಿಕೊಡಿ ಎಂದು ನಾನು ಕೇಳಿದ್ದಕ್ಕೆ ಪರಿಶೀಲಿಸುತ್ತೇನೆಂದು ಹೇಳಿದ್ದಾರೆ. ಆದರೆ ಈಗ ನೋಡಿದರೆ ಹಣದ ಕೊರತೆ ಇವಂತ್ತು ಕಂಟ್ರಾ ಕ್ಟರ್‌ನ ವಿಳಂಬದಿಂದಾಗಿ ಈ ಕೆಲಸ ನಿಧಾನವಾಗಿದೆ ಎಂದು ಹೇಳುತ್ತಿದ್ದೀರಿ? ಇದಕ್ಕೆ ನಾನು ಏನು ಮಾಡಬೇಕು? ಸ್ವಾಮಿ, ನಾನು ಒಂದು ಮಾತನ್ನು ಹೇಳಿದರೆ ತಪ್ಪುಗೆ ಆಶ್ಚರ್ಯವಾಗಬಹುದು. ಈ ಕಂಟ್ರಾ ಕ್ಟರ್ ಏನಿದ್ದಾನೆ ಇವನು ನಮ್ಮ ಇಡೀ ಜಿಲ್ಲೆಯಲ್ಲೇ 'ಎ' ಕ್ಲಾಸ್ ಕಂಟ್ರಾ ಕ್ಟರ್ ಇವನು ಅನೇಕ ಕಡೆ ಇಲಾಖೆಯ ಕೆಲಸಗಳನ್ನು ಮಾಡಿಸುತ್ತಿದ್ದಾನೆ. ಅಂದಮೇಲೆ ಅಲ್ಲೆಲ್ಲಾ ಇವನಿಗೆ ಕೊಡಬೇಕಾದ ಹಣವನ್ನು ತಡೆ ಹಿಡಿಯಿರಿ. ನಿಮ್ಮ ಇಡೀ ಇಲಾಖೆಯಲ್ಲಿ ಆಗಬೇಕಾದ್ದು ಇದೊಂದೇ ಒಂದು ಕಟ್ಟಡ. ಇನ್ನೂ ೧ ವರ್ಷದಲ್ಲಾದರೂ ಇದು ಪೂರೈಸುವಂತೆ ಇದಕ್ಕೆ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಿ ಕೆಲಸವನ್ನು ಪೂರ್ಣಮಾಡಿಸಿ ಕೊಡುತ್ತೀರಾ?

ಶ್ರೀ ಎಂ. ಚಂದ್ರಶೇಖರ್.—ಇದಕ್ಕೆ ೧೯೬೯ನೇ ಇಸವಿಯವರೆಗೂ ಕಾಲಾವಕಾಶ ಇದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಷ್ಟರೊಳಗೆ ಮುಗಿಸಿಕೊಡಿ.

ಶ್ರೀ ಎಂ. ಚಂದ್ರಶೇಖರ್.—ಈಗ ಪಾಯದವರೆಗೆ ಕೆಲಸವಾಗಿದೆ. ಆದಷ್ಟುಬೇಗ ಈ ಕೆಲಸವನ್ನು ಪೂರ್ಣ ಮಾಡಿಸಲು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—'ಪಂಚತಾಯಿ ಧೋರಣೆ' ಎಂದು ನಾನು ವಿತಕ್ಕೆ ಹೇಳಿದೆ ಎಂದರೆ, ಕುಶಾಲ ನಗರದ ಕಾಲೇಜಿಗೆ ೧ ಲಕ್ಷ ರೂಪಾಯಿ ವಂತಿಗೆಯನ್ನು ಕೊಡದಿದ್ದರೂ ಆ ಕಾಲೇಜಿನ ಕಟ್ಟಡದ ಕೆಲಸವನ್ನು ಆ ಕಂಟ್ರಾ ಕ್ಟರ್ ಪೂರ್ಣ ಮಾಡಿದ್ದಾನೆ. ಆದರೆ ನಾನು ನನ್ನ ಕ್ಷೇತ್ರದ ಜನರಿಂದ ೧ ಲಕ್ಷ ರೂಪಾಯಿ ವಂತಿಗೆಯನ್ನು ವಸೂಲ್ಮಾಡಿ ಕೊಟ್ಟರೂ ಆ ಕಾಲೇಜಿನ ಕಟ್ಟಡ ಪೂರ್ಣ ಆಗಲಿಲ್ಲ. ಇದರ ಬಗ್ಗೆ ಪ್ರತಿಯೊಂದು ಅಧಿವೇಶನದಲ್ಲೂ ಪ್ರಸ್ತಾಪ ಮಾಡಿದ್ದೇನೆ. ಆದರೂ ಈ ಕೆಲಸ ಆಗಿಲ್ಲ. ಆದ್ದರಿಂದ ಈ ಅವಧಿ ಮುಗಿಯುವುದರೊಳಗಾಗಿಯಾದರೂ ಕಟ್ಟಡದ ಕೆಲಸವನ್ನು ಪೂರ್ಣ ಮಾಡಿಸಿಕೊಡಿ.

ಶ್ರೀ ಎಂ. ಚಂದ್ರಶೇಖರ್.—ಈ ಅವಧಿಯೊಳಗೆ ಅಂದರೆ ೧೯೮೯ರೊಳಗೆ ಮುಂಗಿಸಿಕೊಡುವಂತೆ ಕ್ರಮ ಕೈಗೊಳ್ಳುತ್ತೇನೆ.

ರಾಜ್ಯದಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಬ್ಯಾಂಕ್ ಸ್ಥಾಪಿಸುವ ಬಗ್ಗೆ

೧೧೮೮ ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ) ಮಾನ್ಯ ನಿಯಂತ್ರಿತ ಮಾರುಕಟ್ಟೆ ಮತ್ತು ಖುಷ್ಕಿ ಜಮೀನು ಅಭಿವೃದ್ಧಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿನ ಮಾರುಕಟ್ಟೆ ಸಮಿತಿಗಳ ನಿವ್ವಳ ಆದಾಯವೆಷ್ಟು?

ಆ) ಮಾರುಕಟ್ಟೆ ಸಮಿತಿಗಳ ರಾಜ್ಯಮಟ್ಟದ ಮಹಾ ಮಂಡಲದ ನಿವ್ವಳ ಆದಾಯವೆಷ್ಟು?

ಇ) ರಾಜ್ಯದಲ್ಲಿನ ಮಾರುಕಟ್ಟೆ ಸಮಿತಿಯಿಂದ ರೆಗ್ಯುಲೇಟ್ ಮಾಡಿರುವ ಸರಕುಗಳ ವಹಿವಾಟಿನ ಮೊಬಲಗೆಷ್ಟು?

ಈ) ಪ್ರತಿ ಮಾರುಕಟ್ಟೆ ಸಮಿತಿಯಲ್ಲಿ ರೆಗ್ಯುಲೇಟೆಡ್ ಮಾರ್ಕೆಟಿಂಗ್ ರಾಜ್ಯಮಟ್ಟದ ಬ್ಯಾಂಕು ಮಾಡುವುದರಿಂದ ರೈತರಿಗೆ ಹಾಗೂ ವ್ಯಾಪಾರಸ್ಥರಿಗೆ ಯೋಗ್ಯ ಸಮಯದ ವಹಿವಾಟಿನಲ್ಲಿ ಲಾಭಕಾರಿ ಯಾಗುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ ಆ ಬ್ಯಾಂಕನ್ನು ಸ್ಥಾಪಿಸಲಾಗುವುದೇ?

ಶ್ರೀ ಕೆ. ಅಪ್ಪರನಾಥ ಶೆಟ್ಟಿ (ಮಂಜರಾಯಿ ಮಂತ್ರಿ ನಿಯಂತ್ರಿತ ಮಾರುಕಟ್ಟೆ ಮಂತ್ರಿ ಖುಷ್ಕಿ ಜಮೀನು ಅಭಿವೃದ್ಧಿ ರಾಜ್ಯ ಮಂತ್ರಿಗಳು).—

ಅ) ೧೯೮೬-೮೭ನೇ ಸಾಲಿನ ರಾಜ್ಯದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ನಿವ್ವಳ ಆದಾಯ ರೂ. ೧೧೧೯. ೭೨ (ಲಕ್ಷ ರೂ, ಗಳಲ್ಲಿ)

ಆ) ೧೯೮೬-೮೭ನೇ ಸಾಲಿನ ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಯ ನಿವ್ವಳ ಆದಾಯ ರೂ. ೪೩, ೦೬,೫೫೧-೯೪.

ಇ) ೧೯೮೬-೮೭ನೇ ಸಾಲಿನಲ್ಲಿ ರಾಜ್ಯದ ಮಾರುಕಟ್ಟೆ ಸಮಿತಿಯಿಂದ ರೆಗ್ಯುಲೇಟ್ ಮಾಡಿರುವ ಸರಕುಗಳ ವಹಿವಾಟಿನ ಮೌಲ್ಯ (ಕೋಟಿ ರೂಗಳಲ್ಲಿ) ರೂ. ೧,೩೦೭-೦೪.

ಈ) ಪರಿಶೀಲಿಸಲಾಗುತ್ತದೆ.

ಉ) ಉಪ ಪ್ರಶ್ನೆ ಈ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ನನ್ನ (ಈ) ಪ್ರಶ್ನೆಗೆ ಉತ್ತರವಾಗಿ 'ಪರಿಶೀಲಿಸಲಾಗುತ್ತಿದೆ' ಎಂದು ಹೇಳಿದ್ದೀರಿ. ಈ ರಾಜ್ಯ ಮಟ್ಟದ ಬ್ಯಾಂಕನ್ನು ಯಾವಾಗ ಸ್ಥಾಪನೆ ಮಾಡುತ್ತೀರಿ ಎಂಬುದನ್ನು ತಾವು ಹೇಳಬೇಕು ?

ಶ್ರೀ ಕೆ. ಅಪ್ಪರನಾಥಶೆಟ್ಟಿ.—ಈ ರಾಜ್ಯ ಮಟ್ಟದ ಬ್ಯಾಂಕ್ ಸ್ಥಾಪನೆ ಮಾಡುವ ವಿಷಯ ಕರ್ನಾಟಕ ಕೃಷಿ ಉತ್ಪನ್ನ ಮಾರಾಟ ನಿಯಂತ್ರಣ ಕಾಯಿದೆ ೧೯೬೨ಕ್ಕೆ ತಿದ್ದುಪಡಿ ಮಾಡಲು ರಚಿಸಿರುವ ಸಮಿತಿಯ ಮುಂದೆ ಪರಿಶೀಲನೆಯಲ್ಲಿದೆ. ಆ ಸಮಿತಿ ವರದಿ ಬಂದ ಕೂಡಲೇ ಈ ಬಗ್ಗೆ ಪರಿಶೀಲನೆ ಮಾಡಲಾಗುವುದು.

ಶ್ರೀ ಮಲ್ಲಾರಿ ಗೌಡ ಎಸ್. ಪಾಟೀಲ್.—ರೆಗ್ಯುಲೇಟೆಡ್ ಮಾರ್ಕೆಟಿಂಗ್ ಯಾರ್ಡ್‌ನಲ್ಲಿ ಬ್ಯಾಂಕ್ ಸ್ಥಾಪನೆ ಮಾಡುವುದರಿಂದ ರೈತರಿಗೆ ಬಹಳ ಅನುಕೂಲವಾಗುತ್ತದೆ. ಆದರೆ ಇದು ಪರಿಶೀಲನೆಯಲ್ಲಿದೆ ಎಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಇದಕ್ಕೆ ಸಂಬಂಧಪಟ್ಟ ಸಮಿತಿಯ ಮುಂದೆ ನಾನೂ ಸಹ ಇದು ಜಾಗ್ರತೆ ಆಗಬೇಕೆಂದು ವಿನಂತಿ ಮಾಡಿಕೊಂಡಿದ್ದೇನೆ. ಆದ್ದರಿಂದ ಆ ಸಮಿತಿಯ ವರದಿ ಯಾವಾಗ ಬರುತ್ತದೆ ಮತ್ತು ಅದನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ಹಾಗೂ ಇದಕ್ಕೆ ಸಂಬಂಧಪಟ್ಟಂತೆ ಯಾವ ಯಾವ ಕಾರ್ಯಕ್ರಮಗಳನ್ನು ಕೈಗೊಂಡಿದ್ದೀರೆಂಬುದನ್ನು ಹೇಳಬೇಕು ?